Form No.4 (Civil)
Deposition Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 93/2019

ಪ್ರಾ.ಸಾ. 1 ಚಾ.ಸಾ 1

| | | |
|---|---|---|
| ಹೆಸರು | : | ಕಾಶಮ್ಮ |
| ಗಂಡನ ಹೆಸರು | : | ಹಣಮಂತ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸ | : | ಗುರುಮಠಕಲ್ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 08-01-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಮೃತ ಹಣಮಂತ ನನ್ನ ಗಂಡನಾಗಿರುತ್ತಾನೆ. ಚಾಸಾ-4 ನನ್ನ ಅತ್ತೆ ಆಗಿರುತ್ತಾಳೆ. ಆರೋಪಿ ನನ್ನ ಗಂಡನ ಅಣ್ಣನಾಗಿರುತ್ತಾನೆ. ಚಾಸಾ-5 ರಿಂದ 11 ರವರ ಪರಿಚಯ ಇರುತ್ತದೆ. ಹಣಮಂತ ಇವರು ಯಾವ ರೀತಿಯಾಗಿ ಏನಾಗಿ ಮೃತಪಟ್ಟಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. ಇಂತಹವರೇ ಹೊಡೆದಿದ್ದಕ್ಕಾಗಿ ಹಣಮಂತ ಮೃತಪಟ್ಟಿರುತ್ತಾನೆ ಎಂದು ನಾನು ಪೊಲೀಸರ ಮುಂದೆ ದೂರು ಕೊಟ್ಟಿರುವುದಿಲ್ಲ. ಸಾಕ್ಷಿದಾರರಿಗೆ ಈಗ ದೂರು ತೋರಿಸಲಾಗಿದ್ದು ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.1** ಎಂದು ಗುರುತಿಸಲಾಯಿತು. ನಿ.ಪಿ.1 ರಲ್ಲಿ ಬರೆದ ವಿಷಯ ನನಗೆ ಗೊತ್ತಿರುವುದಿಲ್ಲ.

**(ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

2. ದಿಃ 20.04.2019 ರಂದು ಸಾಯಂಕಾಲ 6.00 ಗಂಟೆಗೆ ನಾನು ಮನೆಯಲ್ಲಿ ಇದ್ದಾಗ ಚಾಸಾ-11 ರವರು ಬಂದು ತಿಳಿಸಿದ್ದೇನೆಂದರೆ ನನ್ನ ಗಂಡನಿಗೆ ಗುರುಮಠಕಲ್ ಸರಕಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ

ಎಂದು ತಿಳಿಸಿ ಮೇರೆಗೆ ನಾನು ಮತ್ತು ಚಾಸಾ-10 ರವರು ಕೂಡಿ ಆಸ್ಪತ್ರೆಗೆ ಹೋದೆವು  ಎಂದರೆ ಸರಿಯಲ್ಲ. ಅಲ್ಲಿ ಹೋಗಿ ನಾನು ನನ್ನ ಗಂಡನಿಗೆ ನೋಡಲಾಗಿ ಆತನು ಮೃತಪಟ್ಟಿದ್ದ ಮತ್ತು ಸ್ಥಳದಲ್ಲಿ ಇದ್ದ ಚಾಸಾ-4 ಮತ್ತು 7 ರವರಿಗೆ ವಿಚಾರಿಸಲಾಗಿ ಆ ದಿವಸ ಶಿವಪೂರ ಗ್ರಾಮದಲ್ಲಿ ತಮ್ಮ ಸಂಬಂಧಿಕರು ಮೃತ ಪಟ್ಟಿದ್ದರಿಂದ ನಾವು ಮತ್ತು ಆರೋಪಿ ಮತ್ತು ಮೃತ ಹಣಮಂತ ಎಲ್ಲರೂ ಕೂಡಿ ಶಿವಪೂರಕ್ಕೆ ಹೋಗಿ ವಾಪಸ್ಸು ಬಂದಿದ್ದೇವು ಎಂದು ಹೇಳಿದರು ಎಂದರೆ ಸರಿಯಲ್ಲ. ಮುಂದುವರೆದು ವಾಪಸ್ಸು ಬಂದಾಗ ಜೀಪಿನ ಬಾಡಿಗೆ ಹಣವನ್ನು ಕೊಡುವ ಬಗ್ಗೆ ನನ್ನ ಗಂಡನಿಗೆ ಹಾಗೂ ಆರೋಪಿಗೆ ತಕರಾರುಗಳು ಆದವು ಎಂದು ತಿಳಿಸಿದರು ಎಂದರೆ ಸರಿಯಲ್ಲ. ಆಗ ಆರೋಪಿತನು ಚಾಸಾ-4 ರವರೊಂದಿಗೆ ಜಗಳ ತೆಗೆದಿದ್ದರಿಂದ ನನ್ನ ಗಂಡ ನಡುವೆ ಹೋಗಿ ಚಾಸಾ-4 ತಾಯಿಯವರಿಗೆ ಏಕೆ ದಬ್ಬಾಡಿತ್ತಿಯಾ ಎಂದು ಆರೋಪಿತನಿಗೆ ಕೇಳಿದಾಗ ಆರೋಪಿತನು ಮೃತನಿಗೆ ಸಿಟ್ಟಿನಿಂದ ಎದೆಯ ಮೇಲಿನ ಬನಿಯನ್ ಹಿಡಿದು ಕುತ್ತಿಗೆಗೆ ಕೈ ಹಾಕಿ ನೂಕಿಸಿ ಕೂಟ್ಟ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಆರೋಪಿತನು ನೂಕಿ ಕೊಟ್ಟಿದ್ದರಿಂದ ಮೃತನು ರಸ್ತೆಯ ಮೇಲೆ ಅಂಗಾತ ಆಗಿ ಬಿದ್ದು ತಲೆಗೆ ಪೆಟ್ಟಾಗಿ ಮೃತಪಟ್ಟಿದ್ದನು ಎಂದು ತಿಳಿಸಿದರು ಎಂದರೆ ಸರಿಯಲ್ಲ. ನನ್ನ ಗಂಡನ ಸಾವಿಗೆ ಆರೋಪಿತನು ಕಾರಣ ಎಂದು ನಿ.ಪಿ.1 ರಂತೆ ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

3. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತನು ನನ್ನ ಸಂಬಂಧಿ ಆಗಿದ್ದರಿಂದ ಆತನೊಂದಿಗೆ ರಾಜಿ ಆಗಿದ್ದರಿಂದ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ವ್ಹೆ.ಎಸ್.ಡಿ. ವಕೀಲರಿಂದ</u>

- ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.